

ಡೌಗ್ ಟಾಂಪ್ಕಿನ್



ವೋನ್ ಚೌನಾರ್ಡ್

ಮಹಾಯುದ್ಧದ ಸಂದರ್ಭದಲ್ಲಿ ಉಂಟಾದ ತೀವ್ರತರ ಆರ್ಥಿಕ ಸಂಕಷ್ಟದ ಪರಿಣಾಮವಾಗಿ ಎಲ್ಲ ಸಂಪನ್ಮೂಲಗಳನ್ನು ಕಾಳಜಿಯಿಂದ ಬಳಸಿಕೊಳ್ಳಬೇಕು ಎಂಬ ಪ್ರಜ್ಞೆ ಬಂತು. ಬಟ್ಟೆಗಳ ಉತ್ಪಾದನೆಯೂ ಕುಂಠಿತವಾಗಿತ್ತು. ದುಪ್ಪಟ್ಟಿದ್ದ ಬೇಡಿಕೆಯನ್ನು ನಿರ್ವಹಿಸುವ ಸಲುವಾಗಿ ಬಟ್ಟೆಗಳ ಬೇಡಿಕೆಯನ್ನು ಕಡಿಮೆ ಮಾಡುವುದು ಹಾಗೂ ದಿನೇದಿನೇ ಹೆಚ್ಚುತ್ತಿರುವ ತ್ಯಾಜ್ಯದ ಪ್ರಮಾಣವನ್ನು ಕಡಿಮೆ ಮಾಡುವ ಸಲುವಾಗಿಯೇ ದಿರಿಸುಗಳನ್ನು ವಿಶಿಷ್ಟವಾಗಿ ವಿನ್ಯಾಸಗೊಳಿಸಲಾಯಿತು. ಈ ಚಿಂತನೆಯ ಕೊಡುಗೆಯೇ 'ಸಿಂಚೆಡ್ ವೇಸ್ಟ್', 'ಬಾಕ್ಸ್ ಕಟ್' ಹಾಗೂ 'ಮಿನಿ ಸ್ಕರ್ಟ್'ಗಳ ವಿನ್ಯಾಸ.

ಈ ನೈತಿಕ ಫ್ಯಾಷನ್ ಚಿಂತನೆ ಸಾರ್ವಜನಿಕವಾಗಿ ಹಬ್ಬಿದ್ದು ಮತ್ತು ಒಂದು ಚಳವಳಿಯ ರೂಪ ಪಡೆದುಕೊಂಡಿದ್ದು 80ರ ದಶಕದ ಅಂತ್ಯ ಮತ್ತು 90ರ ದಶಕದ ಆರಂಭದಲ್ಲಿ. ಆ ಕಾಲದಲ್ಲಿ ಜನಪ್ರಿಯವಾಗಿದ್ದ ಅಮೆರಿಕದ 'ಪೆಟಗೋನಿಯ' ಹಾಗೂ 'ಎಸ್ಪಿರಿಟ್' ಎಂಬೆರಡು ಕಂಪನಿಗಳು ಈ ಚಳವಳಿಯನ್ನು ಮುಂಚೂಣಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದವು. ಅವು ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಪರಿಸರಸ್ನೇಹಿ ಉತ್ಪಾದನೆಯತ್ತ ಹೆಜ್ಜೆ ಇಟ್ಟವು. ಈ ಕಂಪನಿಗಳ ಮಾಲೀಕರಾಗಿದ್ದ ವೋನ್ ಚೌನಾರ್ಡ್ ಹಾಗೂ ಡೌಗ್ ಟಾಂಪ್ಕಿನ್

## ನೈತಿಕ ಫ್ಯಾಷನ್‌ಗೆ ಸಪ್ತ ಸೂತ್ರ

ನೈತಿಕ ಫ್ಯಾಷನ್ ದಿನಕಳೆದಂತೆ ತನ್ನ ವಿಸ್ತಾರವನ್ನು ಹೆಚ್ಚಿಸಿಕೊಂಡಿತು. ಬಟ್ಟೆಗಳನ್ನು ತಯಾರಿಸುವ ಪ್ರತಿ ಹಂತದಲ್ಲಿಯೂ ಪರಿಸರಕ್ಕೆ ಪೂರಕವಾದ ನಿಯಮಗಳನ್ನು ಅನುಸರಿಸುವುದೇ ನೈತಿಕ ಫ್ಯಾಷನ್ ಎಂದು ಕೆಲವರು ಹೇಳಿದರು.

ಇನ್ನೂ ಹಲವರು ಸೆಕೆಂಡ್ ಹ್ಯಾಂಡ್ ಬಟ್ಟೆಗಳನ್ನು ಬಳಸಬೇಕು. ಪ್ರತಿ ಬಾರಿಯೂ ಹೊಸ ಹೊಸ ಬಟ್ಟೆಗಳನ್ನು ಖರೀದಿಸುವ ಬದಲು ಪರಸ್ಪರ ವಿನಿಮಯ ಮಾಡಿಕೊಳ್ಳಬೇಕು. ಇದರಿಂದ ದಿರಿಸುಗಳನ್ನು ಕೊಳ್ಳುವಿಕೆ ಕಡಿಮೆ ಆಗುತ್ತದೆ. ಕ್ರಮೇಣ ಉತ್ಪಾದನೆಯೂ ಕಡಿಮೆ ಆಗುತ್ತದೆ ಎಂದು ಅಭಿಪ್ರಾಯಪಟ್ಟರು.

ಒಟ್ಟಿನಲ್ಲಿ ಉತ್ಪಾದನೆ ಹಾಗೂ ಬಳಕೆಯ ಪ್ರತಿ ಹಂತದಲ್ಲಿಯೂ ಪರಿಸರಕ್ಕೆ ಪೂರಕವಾದ, ಸಾಮಾಜಿಕವಾಗಿ ಹಾಗೂ ನೈತಿಕವಾಗಿ ಸರಿ ದಾರಿಯಲ್ಲಿ ನಡೆಯುವುದೇ ನೈತಿಕ ಫ್ಯಾಷನ್ ಎನ್ನುವ ಒಮ್ಮತವೂ ಹುಟ್ಟಿಕೊಂಡಿತು.

ಈ ಎಲ್ಲ ವಾದಗಳ ಹಿನ್ನೆಲೆಯಲ್ಲಿ ಫ್ಯಾಷನ್ ಹಾಗೂ ಟೆಕ್ಸ್‌ಟೈಲ್ ಕಂಪನಿಗಳ ಸಲಹಾ ಸಂಸ್ಥೆಯಾಗಿ ಕೆಲಸ ಮಾಡುತ್ತಿರುವ 'ಗ್ರೀನ್ ಸ್ಟ್ರೆಟೆಜೀಸ್', ನೈತಿಕ ಫ್ಯಾಷನ್ ಫ್ಯಾಷನ್‌ನ ಏಳು ಗುಣಗಳನ್ನು ಪಟ್ಟಿ ಮಾಡಿದೆ.

ನೂತನವಾಗಿ ಉತ್ಪಾದನೆಯಾಗುವ ಉಡುಪುಗಳು ಈ ಎಲ್ಲಾ ನಿಯಮಗಳ ಆಧಾರದಲ್ಲಿಯೇ ಆಗಬೇಕು. ಟ್ರೆಂಡ್ ವಿನ್ಯಾಸಗಳಿಗೆ ತಕ್ಕಂತೆ ಬಗೆಬಗೆಯ ದಿರಿಸು ಸೃಷ್ಟಿಸುವ ಬದಲು ಬೇಡಿಕೆಗೆ ಅನುಗುಣವಾಗಿ ಗ್ರಾಹಕನಿಗೆ ಯಾವ ವಿನ್ಯಾಸ ಬೇಕು ಎನ್ನುವುದರ ಮೇಲೆ ಉತ್ಪಾದನೆ ಆಗಬೇಕು.

ಸಿದ್ಧಗೊಳ್ಳುವ ಉಡುಪು ಅತ್ಯುತ್ತಮ ಗುಣಮಟ್ಟದ್ದಾಗಿರಬೇಕು ಹಾಗೂ ಎಲ್ಲ ಕಾಲಕ್ಕೂ ಸಲ್ಲುವಂತಿರಬೇಕು. ನೈತಿಕ ಮಾನದಂಡಗಳನ್ನೇ ಅನುಸರಿಸಿ ನ್ಯಾಯೋಚಿತವಾಗಿ ರೂಪುಗೊಂಡ ಪರಿಸರಸ್ನೇಹಿ ಉಡುಪು ಅವಾಗಿರಬೇಕು. ಕೆಲವೇ ಕೆಲವು ಬಾರಿ ಬಳಸಿ ಎಸೆಯುವ ಬದಲು ಜತನದಿಂದ ಬಳಸಿ ಬಹಳ ಕಾಲದವರೆಗೆ ಉಳಿಯುವಂತೆ ನೋಡಿಕೊಳ್ಳಬೇಕು.




ಅಗತ್ಯವಿದ್ದಾಗ ದುರಸ್ತಿ, ಹಾಗೂ ಮರುವಿನ್ಯಾಸ ಮಾಡಿಕೊಂಡು ಧರಿಸಿಕೊಳ್ಳಬೇಕು. ಬಳಸಿದ ಬಟ್ಟೆಗಳ ಅವಶ್ಯಕತೆ ಇಲ್ಲವಾದಾಗ ಸೆಕೆಂಡ್ ಹ್ಯಾಂಡ್ ಬಳಕೆಗೆ ನೀಡಬೇಕು. ದಾನ ಮಾಡಬಹುದು. ಅಥವಾ ಸ್ನೇಹಿತರು, ಸಂಬಂಧಿಕರು ಯಾರಾದರೂ ಬಳಸಿಕೊಳ್ಳುವ ಇಚ್ಛೆ ವ್ಯಕ್ತಪಡಿಸಿದಲ್ಲಿ ಅವರಿಗೆ ನೀಡಬೇಕು.

ಬಳಕೆಗೆ ಯೋಗ್ಯವಾಗದೇ ಇದ್ದ ಸಂದರ್ಭದಲ್ಲಿ ಅವುಗಳನ್ನು ಮರುಬಳಕೆ ಮಾಡುವ ಕಂಪನಿಗಳಿಗೆ ನೀಡಬೇಕು. ಪ್ರತಿ ಬಾರಿಯೂ ಹೊಸ ಹೊಸ ಬಟ್ಟೆಗಳನ್ನು ಖರೀದಿಸುವ ಬದಲು ಬಟ್ಟೆಗಳನ್ನು ಬಾಡಿಗೆಗೆ ಪಡೆಯುವ, ಪರಸ್ಪರ ವಿನಿಮಯ ಮಾಡಿಕೊಳ್ಳುವ ರೂಢಿಯನ್ನು ಹೆಚ್ಚಬೇಕು. ಒಂದೊಮ್ಮೆ ಹೊಸ ಬಟ್ಟೆಯನ್ನೇ ಖರೀದಿಸುವುದಾದಲ್ಲಿ 'ಗ್ರೀನ್ ಅಂಡ್ ಕ್ಲೀನ್' ಹಾಗೂ 'ಫೇರ್ ಅಂಡ್ ಎಥಿಕಲ್' ಪರಿಕಲ್ಪನೆ ಮನದಲ್ಲಿರಲಿ.

